ದಿನಾಂಕಃ15.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು - ಶ್ರೀ. ಆರ್.ಹೆಚ್.ಎಸ್ ವಕೀಲರಿಂದ ಪ್ರತಿವಾದಿ ಪರ

2015ರ ಮೇ ತಿಂಗಳಲ್ಲಿ ಪ್ರತಿವಾದಿ 1 ಮತ್ತು 2ರವರು ಬಂದು ನಮ್ಮ ಬಳಿ ಮಾತನಾಡಿದಾಗ 3 ಮತ್ತು 4 ನೇ ಪ್ರತಿವಾದಿ ಬಗ್ಗೆ ಪ್ರಸ್ತಾವನೆ ಆಗಿರುತ್ತದೆ. 3 ಮತ್ತು 4 ನೇ ಪ್ರತಿವಾದಿಗಳ ಪರಿಚಯ ಈಗಲೂ ಸಹ ಇರುವುದಿಲ್ಲ ನನ್ನ ಮಗಳಿಗೆ ಬೆಳ್ತಂಗಡಿಯಲ್ಲಿ ಕೇಸು ಹಾಕಿದಾಗ ತಿಳಿದು ಬಂದಿರುತ್ತದೆ. ನಾನು ಅಥವಾ ನನ್ನ ಮಗಳು 3 ಮತ್ತು 4 ನೇ ಪ್ರತಿವಾದಿ ಬಳಿ ಎಂದಿಗೂ ಮಾತನಾಡಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿ ಮೇ ತಿಂಗಳಲ್ಲಿ ಮಾತನಾಡಿಕೊಂಡು ಹೋದ ನಂತರ ಪ್ರತಿವಾದಿಗಳ ನಡುವೆ ಏನೇನೂ ಮಾತುಕತೆಯಾಗಿರುತ್ತದೆ ಎಂದು ನನಗೆ ಮಾಹಿತಿ ಇರುತ್ತದೆ. ಜೂನ್ ಮೊದಲನೇ ವಾರದಲ್ಲಿ ವಾದಿ 1 ನೇ ಪ್ರತಿವಾದಿ ಮಾತನಾಡಿದಾಗ ಆಕೆ ಕೆಲಸದಲ್ಲಿ ಮೂರು ಜನರು ಕಾಂಪಿಟಟರ್ ಗಳಾಗಿದ್ದು ಹೆಚ್ಚಿನ ಡೆಪಾಸಿಟ್ ಮಾಡಿಸಿದರೆ ಆಕೆಗೆ ಕೆಲಸ ಸಿಗುವುದಾಗಿ ಹೇಳಿರುತ್ತಾರೆ. ಆ ಸಂದರ್ಭದಲ್ಲಿ ನಾನು ಹಾಜರು ಇದ್ದೆ. ಜೂನ್ ನಲ್ಲಿ 1 ನೇ ಪ್ರತಿವಾದಿ ಎಂದಿಗೂ ನಮ್ಮ ಮನೆಗೆ ಬಂದು ಹಣ ವನ್ನು ಪದನ್ನೋತಿಗಾಗಿ ಡೆಪಾಸಿಟ್ ಮಾಡಲು ಕೇಳಿರುವುದಿಲ್ಲ ಮತ್ತು ನಾವು ಸಹ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಬ್ಯಾಂಕಿನ ದಾಖಲೆಗಳು ಹೊರತುಪಡಿಸಿ 1 ನೇ ಪ್ರತಿವಾದಿಗೆ ಹಣ ನೀಡಿರುತ್ತೇವೆ ಎಂದು ತೋರಿಸಲು ನಮ್ಮ ಬಳಿ ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಖಾತೆಗೆ ಹಣವನ್ನು ಆಕೆ ಪದನ್ನೋತಿಗೆ ಮಾತ್ರ ಜಮಾ ಮಾಡಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ಹೆಚ್ಡಿ ಎಫ್. ಸಿ ಲೈಫ್ ಇನ್ಸರೆನ್ಸೂಗೆ ಸಂಬಂದಪಟ್ಟಂತೆ ನಾನು ಮತ್ತು ವಾದಿ ಯಾವುದೇ ಬ್ರೋಚರ್ ಗಳನ್ನು ಅಥವಾ ಬಡ್ಡಿ ಯಾವ ರೀತಿ ನೀಡಲಾಗುತ್ತದೆ ಎಂಬ ದಾಖಲೆಗಳನ್ನು ನೋಡಿರುವುದಿಲ್ಲ. 1 ನೇ ಪ್ರತಿವಾದಿ ವಾದಿಗೆ ಮೆಸೇಜ್ ಕಳುಹಿಸಿದ ಕೂಡಲೇ ಸದರಿ ವಿಚಾರಗಳನ್ನು ನನ್ನ ಮಗಳು ನನಗೆ ತಿಳಿಸಿರುತ್ತಾರೆ. 1 ನೇ ಪ್ರತಿವಾದಿ ನಾನು ಕಳಹಿಸಿದ ಮೇಸಜ್ ನಲ್ಲಿ ಯಾವ ಕಾರಣಕ್ಕೆ ಹಣ ಪಡೆದುಕೊಂಡಿರುತ್ತಾರೆ ಎಂದು ತಿಳಿಸಿರುವುದಿಲ್ಲ ಆದರೆ ಕರೆ ಮಾಡಿದಾಗ ಹೇಳಿರುತ್ತಾರೆ. ಆಕೆ ಕರೆ ಮಾಡಿದಾಗ ನಾವು ರೆಕಾರ್ಡು ಮಾಡಿರುವುದಿಲ್ಲ. 3 ಮತ್ತು 4 ನೇ ಪ್ರತಿವಾದಿ ಮಾಡಿರುವ ವ್ಯವಹಾರಕ್ಕೂ , 1 ಮತ್ತು 2 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ನಾವೇ 1 ನೇ ಪ್ರತಿವಾದಿಗೆ ಕರೆ ಮಾಡಿ ಬ್ಯಾಂಕಿನ ಖಾತೆ ವಿವರ ಕೇಳಿರುತ್ತೇವೆ ಎಂದರೆ ಸರಿಯಲ್ಲ.

ಅಕ್ಟೋಬರ್ 2015 ನೇ ಇಸವಿಯಲ್ಲಿ ನಾವು 1 ನೇ ಪ್ರತಿವಾದಿಯಿಂದ ಹಣವನ್ನು ಹಿಂದಿರುಗಿಸಲು ಕೇಳಿರುತ್ತೇವೆ ಆಕೆ ಹಿಂದಿರುಗಿಸುತ್ತೇನೆ ಎಂದು ಹೇಳಿರುತ್ತಾರೆ. ನನ್ನ ಮಗಳು 1 ನೇ ಪ್ರತಿವಾದಿಗೆ ನೀಡುವ ಹಣ ಬಾಕಿ ಇದ್ದು ಅದನ್ನು ಖಾತೆಗೆ ಹಾಕಿರುತ್ತಾರೆ ಹೊರತು ಪದನ್ನೋತಿಗೆ ಯಾವುದೇ ಹಣ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಮಾಡಿಕೊಳ್ಳಲು ಯಾವುದೇ ತೊಂದರೆ ಇತ್ತಾ ಎಂದರೆ ಸಾಕ್ಷಿ ನಂಬಿಕೆ ಇದ್ದ ಕಾರಣ ಮಾಡಿಕೊಂಡಿರುವುದಿಲ್ಲ ಎನ್ನುವರು.

ಬೆಂಗಳೂರಿನಲ್ಲಿ ನನ್ನ ಮಗಳು ಒಂದು ನಿವೇಶನ ಖರೀದಿ ಮಾಡಿರುತ್ತಾರೆ. 2013 ನೇ ಇಸವಿಯಲ್ಲಿ ಅವರು ಆ್ಯಕ್ಸಿಸ್ ಬ್ಯಾಂಕಿನಲ್ಲಿ ಸಾಲ ಪಡದು ಖರೀದಿ ಮಾಡಿರುತ್ತಾರೆ. ಅದರ ಪೂರ್ವದಲ್ಲಿ ಅವರು ಖರೀದಿ ಮಾಡಿದ ನಿವೇಶನ ಸಹ ಮಾರಾಟ ಮಾಡಿರುತ್ತಾರೆ. ಅದನ್ನು ಅವರು 2015 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ. ನನ್ನ ಮಗಳು 1 ನೇ ಪ್ರತಿವಾದಿಯಿಂದ ನಿವೇಶನ ಖರೀದಿ ಮಾಡಲು 15 ಲಕ್ಷ ಹಣ ಕಮ್ಮಿಯಾಗಿರುತ್ತದೆ ಆ ಕಾರಣ ಹಣ ಬೇಕೆಂದು ಬೇಡಿಕೆ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ನನ್ನ ಮಗಳು 2013 ರಲ್ಲಿ ನಿವೇಶನ ಖರೀದಿ ಮಾಡಿದ ಕಾರಣ ಆಕೆ ವಾದಿ 2014 ರಲ್ಲಿ ಹಣ ಕೇಳುವ ಅವಶ್ಯಕತೆ ಇರುವುದಿಲ್ಲ ಎನ್ನುವರು. ಸದರಿ ನಿವೇಶನಕ್ಕೆ ಪಡೆದ ಹಣವನ್ನು ಬ್ಯಾಂಕಿನ ಆರ್.ಟಿ ಜಿ.ಎಸ್ ಎಸ್ ಮೂಲಕ ನನ್ನ ಮಗಳು ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳು 1 ನೇ ಪ್ರತಿವಾದೀ ಇನ್ನು ಹಣ ಬೇಕೆಂದು ಬೇಡಿಕೆ ಇಟ್ಟಿದ್ದು ಆಗ 1 ನೇ ಪ್ರತಿವಾದಿ ನೀಡಿರುವುದಿಲ್ಲ ಎಂದು ಹೇಳಿ ನಾವು ಈ ಸುಳ್ಳು ದಾವೆಯನ್ನು ಆಕೆಯ ವಿರುದ್ದ ಹೂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಮಗಳು ಹೆಚ್ ಡಿ ಎಫ್.ಸಿ ಬ್ಯಾಂಕಿನಲ್ಲಿ ಇದ್ದ ಕೆಲಸ ರಿಸೈನ್ ಮಾಡಲು ಯಾವುದೇ ಲೆಟರ್ ಕಳುಹಿಸಿರುವುದಿಲ್ಲ. ಪ್ರತಿವಾದಿಯಿಂದ ನಮಗೆ ಯಾವುದೇ 15 ಲಕ್ಷ ರೂ ಹಣ ಬರಲು ಬಾಕಿ ಇರುವುದಿಲ್ಲ ಮತ್ತು ನಾವು ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗಳಿಗೆ ಕಳುಹಿಸಿ ಕೊಟ್ಟಿರುವ ಹಣ 1 ನೇ ಪ್ರತಿವಾದಿಗೆ ನೀಡಿಲು ಯಾವುದೇ ಬಾದ್ಯಸ್ಥಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗಳಿಗೆ ನಾವು ಕಳುಹಿಸಿದ ಹಣ 1 ನೇ ಪ್ರತಿವಾದಿಗೆ ತಲುಪಿರುತ್ತದ ಎಂದರೆ ಸಾಕ್ಷಿ ಹಣ ಹಾಕಿರುವ ಬಗ್ಗೆ 1 ನೇ ಪ್ರತಿವಾದಿಗೆ ತಿಳಿಸಲಾಗಿರುತ್ತದೆ ಮತ್ತು ಆಕೆ ಹೇಳಿದ ಮೇರೆಗೆ ಅವರಿಗೆ ಹಣವನ್ನು ವರ್ಗಾವಣೆ ಮಾಡಲಾಗಿರುತ್ತದೆ ಎನ್ನುವರು. 1 ನೇ ಪ್ರತಿವಾದಿ ಮೇಲೆ ಹೇಳಿದಂತೆ ಎಂದಿಗೂ 3 ಮತ್ತು 4 ನೇ ಪ್ರತಿವಾದಿಗೆ ಹಣ ಹಾಕಲು ಹೇಳಿರುವುದಿಲ್ಲ ಮತ್ತು

ಅದು ನನಗೆ ಬಂದ ಹಾಗೆ ಎಂದು ಸಹ ತಿಳಿಸಿರುವುದಿಲ್ಲ ಮತ್ತು ಮೆಸೇಜ್ ಸಹ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಹ ಹಾಜರುಪಡಿಸಿರುವ ಮೆಸೇಜ್ ದಾಖಲೆಗಳಲ್ಲಿ 3 ಮತ್ತು 4 ನೇ ಪ್ರತಿವಾದಿಗಳಿಗೆ ಹಣ ನೀಡಿದರೆ ಅದು 1 ನೇ ಪ್ರತಿವಾದಿಗೆ ನೀಡಿದಂತೆ ಎಂದು ಇರುವುದಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿ ಮತ್ತು ನನ್ನ ಮಗಳ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇದೆಯಾ ಎಂದರೆ ಸಾಕ್ಷಿ ನನ್ನ ಮಗಳು ಹೇಳಿದ ಕಾರಣ ನನಗೆ ತಿಳಿದಿರುತ್ತದೆ ಎನ್ನುವರು. ವಾದಿಗೆ 1 ನೇ ಪ್ರತಿವಾದಿ ಯಾವುದೇ ಬಾಕಿ ಹಣ ನೀಡಲು ಇಲ್ಲದಿದ್ದರೂ ಸಹ ಆಕೆಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ